# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1198**

**ಸದಸ್ಯರ ಹೆಸರು : ಶ್ರೀ ಸಿ.ಎನ್ ಮಂಜೇಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**

**ಉತ್ತರಿಸುವ ದಿನಾಂಕ : 19.12.2024**

**ಉತ್ತರಿಸುವ ಸಚಿವರು : ಗೃಹ ಸಚಿವರು**

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿರುವ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ಸಂಖ್ಯೆ ಎಷ್ಟು;</td><td>ರಾಜ್ಯದಲ್ಲಿರುವ ಪೊಲೀಸ್ ಕಾನ್ಸ್‌ಟೇಬಲ್ ವೃಂದದ ವಿವಿಧ ಹುದ್ದೆಗಳ ಬಲಾಬಲದ ಮಾಹಿತಿ ಈ ಕೆಳಕಂಡಂತಿರುತ್ತದೆ.
<table>
<tr><th>ಹುದ್ದೆ</th><th>ಮಂಜೂರಾತಿ ಬಲ</th><th>ಹಾಲಿ ಬಲ</th><th>ರಿಕ್ತ ಸ್ಥಾನ</th></tr>
<tr><td>ಪಿಸಿ(ಸಿವಿಲ್)</td><td>36326</td><td>29553</td><td>6773</td></tr>
<tr><td>ಎಪಿಸಿ(ಸಿಎಆರ್/ ಡಿಎಆರ್)</td><td>13620</td><td>9486</td><td>4134</td></tr>
<tr><td>ಪಿಸಿ(ಎಫ್‌ಪಿಬಿ)</td><td>66</td><td>50</td><td>16</td></tr>
<tr><td>ಪಿಸಿ(ನಿಸ್ತಂತು)</td><td>454</td><td>178</td><td>276</td></tr>
<tr><td>ಸ್ಪೆ.ಆರ್‌ಪಿಸಿ (ಕೆಎಸ್‌ಆರ್‌ಪಿ)</td><td>8047</td><td>4476</td><td>3571</td></tr>
<tr><td>ಪಿಸಿ (ಕೆಎಸ್‌ಐಎಸ್‌ಎಫ್)</td><td>1746</td><td>1575</td><td>171</td></tr>
<tr><td>ಒಟ್ಟು</td><td>60259</td><td>45318</td><td>14941</td></tr>
</table>
</td></tr>
<tr><td>ಆ.</td><td>ನಿಯಮಾನುಸಾರ ಎಷ್ಟು ಜನರಿಗೆ ಒಟ್ಟು ಪೊಲೀಸ್ ಕಾನ್ಸ್‌ಟೇಬಲ್ ಇರಬೇಕಾಗಿದೆ;</td><td>ಜನಸಂಖ್ಯೆ ಮತ್ತು ಪೊಲೀಸ್ ಅನುಪಾತದ ಕುರಿತು ಪ್ರಸ್ತುತ ರಾಷ್ಟ್ರೀಯ ಮಟ್ಟದಲ್ಲಿ ಯಾವುದೇ ಮಾನದಂಡ ಇರುವುದಿಲ್ಲ. ಕೇಂದ್ರ ಗೃಹ ಮಂತ್ರಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುವ ಬ್ಯೂರೋ ಆಫ್ ಪೊಲೀಸ್ ರಿಸರ್ಚ್ & ಡೆವೆಲಪ್‌ಮೆಂಟ್ (ಬಿಪಿಆರ್&ಡಿ)ರ ವತಿಯಿಂದ ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೊಲೀಸ್ ಸಂಘಟನೆಗಳ ಕುರಿತು ಭಾರತದ ಪೊಲೀಸ್ ಸಂಘಟನೆಗಳ ಕುರಿತು ಮಾಹಿತಿಯನ್ನು ಪ್ರಕಟಿಸಲಾಗುತ್ತಿದ್ದು, ಇದರನ್ವಯ 2023ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಒಂದು ಲಕ್ಷ ಜನಸಂಖ್ಯೆಗೆ ಸುಮಾರು 165.04 ಸಂಖ್ಯೆ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ.</td></tr>
</table>

<table>
<tr>
<td>ಇ.</td>
<td>ಆ ಪ್ರಕಾರ ಪೊಲೀಸ್ ಕಾನ್ಸ್‌ಟೇಬಲ್‌ಗಳ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣಗಳೇನು;</td>
<td rowspan="2">ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಗೆ ಮಂಜೂರಾಗಿರುವ ಪೊಲೀಸ್ ಕಾನ್ಸ್ ಟೇಬಲ್ ಹುದ್ದೆಗಳಲ್ಲಿ ಕಾಲಕಾಲಕ್ಕೆ ರಿಕ್ತವಾಗುವ ಹುದ್ದೆಗಳನ್ನು ನೇಮಕಾತಿ ಪ್ರಕ್ರಿಯೆಗಳನ್ನು ಕೈಗೊಂಡು ಭರ್ತಿಮಾಡಿಕೊಳ್ಳಲಾಗುತ್ತಿದ್ದು, ಪ್ರಸ್ತುತ ರಿಕ್ತವಿರುವ ಪೊಲೀಸ್ ಕಾನ್ಸ್ ಟೇಬಲ್ ಹುದ್ದೆಗಳ ಭರ್ತಿಯ ಸಂಬಂಧ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗುತ್ತಿದೆ.<br><br>
➢ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ನೇಮಕಾತಿಯ ಪ್ರಕ್ರಿಯೆಯ ಬಾಗಶಃ ಪೂರ್ಣಗೊಂಡಿದ್ದು, ಅಭ್ಯರ್ಥಿಗಳ ವೈದ್ಯಕೀಯ ಹಾಗೂ ಶೈಕ್ಷಣಿಕ ದಾಖಲೆಗಳ ನೈಜ್ಯತೆಯ ಕುರಿತು ಪರಿಶೀಲನಾ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು ಪರಿಶೀಲನಾ ಪ್ರಕ್ರಿಯೆಯು ಪೂರ್ಣಗೊಂಡಿರುವ ಅಭ್ಯರ್ಥಿಗಳಿಗೆ ಈಗಾಗಲೇ ನೇಮಕಾತಿ ಆದೇಶಗಳನ್ನು ನೀಡಲಾಗುತ್ತಿರುತ್ತದೆ.<br><br>
<table>
<tr><th>ಹುದ್ದೆ</th><th>ಅಧಿಸೂಚಿತ ಹುದ್ದೆಗಳ ಸಂಖ್ಯೆ</th><th>ನೇಮಕಾತಿ ಆದೇಶಗಳ ಸಂಖ್ಯೆ</th><th>ದಾಖಲಾತಿ ಪರಿಶೀಲನೆ ಬಾಕಿಯಿರುವ ಅಭ್ಯರ್ಥಿಗಳ ಸಂಖ್ಯೆ</th></tr>
<tr><td>ಸಿಪಿಸಿ</td><td>1591</td><td>670</td><td>921</td></tr>
<tr><td>ಎಪಿಸಿ ಸಿಎಆರ್/ಡಿಎಆರ್</td><td>3484</td><td>1385</td><td>2099</td></tr>
</table><br>
➢ 1892 ಸ್ಪೆ.ಆರ್‌ಪಿಸಿ ಮತ್ತು 2176 ಎಪಿಸಿ(ಸಿಎಆರ್/ಡಿಎಆರ್) ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ಈಗಾಗಲೇ ಅನುಮತಿ ನೀಡಿದ್ದು ಈ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು, ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 388 ಸೇನೆನಿ 2024 ದಿನಾಂಕ:25.11.2024ರಲ್ಲಿ ಒಳ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ಹೊಸದಾಗಿ ಯಾವುದೇ ಅಧಿಸೂಚನೆಯನ್ನು ಹೊರಡಿಸಬಾರದೆಂದು ಸೂಚಿಸಿರುವುದರಿಂದ ನೇರ ನೇಮಕಾತಿ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲು ಕಾಯ್ದಿರಿಸಲಾಗಿರುತ್ತದೆ.<br><br>
➢ 2024-25ನೇ ಸಾಲಿನಲ್ಲಿ 5600 ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) ಮತ್ತು 1600 ಸ್ಪೆ.ಆರ್‌ಪಿಸಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡಿಕೊಳ್ಳಲು ಪರಿಶೀಲನೆಯಲ್ಲಿರುತ್ತದೆ.</td>
</tr>
<tr>
<td>ಈ.</td>
<td>ಪೊಲೀಸ್ ಕಾನ್ಸ್‌ಟೇಬಲ್‌ಗಳ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು ಯಾವಾಗ?</td>
</tr>
</table>

ಹೆಚ್‌ಡಿ/319/ಪಿಪಿಎಸ್/2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು